





# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಜನವರಿ ೨೫)

**ಶಾಖಾ ಕೇಂದ್ರಗಳ ಚಟುವಟಿಕೆಗಳು: ಭಾರತದಲ್ಲಿ :**

ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ನವಂಬರ್ ೧೪ರಂದು **ಕಾಮಾರಪುಕುರ** ಕೇಂದ್ರದಲ್ಲಿ ಕಿರಿಯ ಪ್ರಾಥಮಿಕ ಶಾಲೆಯ ಹೊಸ ಕಟ್ಟಡವನ್ನು ಉದ್ಘಾಟಿಸಿದರು. **ಲಂಮ್‌ಡಂಗ್** ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಿದ ಅಡುಗೆಶಾಲೆ-ಭೋಜನಾಲಯವನ್ನು ಸ್ವಾಮಿ ವಿಮಲಾತ್ಮಾನಂದಜಿಯವರು ಉದ್ಘಾಟಿಸಿದರು. **ಮಾಲ್ದಾ** ಕೇಂದ್ರವು (೧೯೨೪-೨೦೨೪) ತನ್ನ ಶತಮಾನೋತ್ಸವವನ್ನು ಪೂರ್ಣಗೊಳಿಸಿದ್ದು, ಡಿಸೆಂಬರ್ ೨೩ರಿಂದ ೨೮ರ ವರೆಗೆ ಅದರ ಸಮಾರೋಪ ಸಮಾರಂಭವನ್ನು ನಡೆಸಿತು. ಸ್ವಾಮಿ ದಿವ್ಯಾನಂದಜಿಯವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. **ಹಲಸೂರು** ಆಶ್ರಮವು ಬೆಂಗಳೂರಿನಲ್ಲಿ ರಾಮಕೃಷ್ಣ ಭಾವಧಾರೆ ಆರಂಭಗೊಂಡು ೧೨೫ ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ವರ್ಷಾವಧಿ ವಿವಿಧ ಕಾರ್ಯಕ್ರಮಗಳನ್ನು ಜನವರಿ ೧ರಂದು ವಿಶೇಷ ಪೂಜೆ, ಭಜನೆ, ಸಾರ್ವಜನಿಕ ಸಭೆಗಳೊಂದಿಗೆ ಆರಂಭಿಸಿದೆ. **ನವದ್ವೀಪ** ಕೇಂದ್ರದಲ್ಲಿ ನವೀಕರಣಗೊಂಡ ಧ್ಯಾನಮಂದಿರವನ್ನು ಜನವರಿ ೫ರಂದು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. **ರಾಂಚಿ ಮೊರಬಾದಿ** ಕೇಂದ್ರವು ಜನವರಿ ೮ ಹಾಗೂ ೨೪ರಂದು ಎರಡು ಕೃಷಿ ಸಮ್ಮೇಳನಗಳನ್ನು ನಡೆಸಿದ್ದು, ಇದರಲ್ಲಿ ೨೩೮೬ ಮಂದಿ ಕೃಷಿಕರು ಭಾಗವಹಿಸಿದ್ದರು. **ಸರ್ಗಾಚಿ** ಆಶ್ರಮದಲ್ಲಿ ಜನವರಿ ೯ರಂದು ಸ್ವಾಮಿ ಗೌತಮಾನಂದಜಿಯವರು ಸ್ವಾಮಿ ಅಖಂಡಾನಂದರ ನವೀಕೃತ ಕೊಠಡಿಯನ್ನು ಉದ್ಘಾಟಿಸಿದರು. **ಝೂರ್‌ಗ್ರಾಮ** ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾದ 'ಮಾ ಶಾರದಾ ಭಕ್ತ ನಿವಾಸ'ವನ್ನು ಜನವರಿ ೧೦ರಂದು ಉದ್ಘಾಟಿಸಲಾಯಿತು. 'ಗಂಗಾಸಾಗರ ಮೇಳ'ದ ಸಂದರ್ಭದಲ್ಲಿ **ಸೇವಾ ಪ್ರತಿಷ್ಠಾನವು** ಜನವರಿ ೧೦ರಿಂದ ೧೬ರ ವರೆಗೆ ವಿವಿಧ ಸೇವಾಕಾರ್ಯವನ್ನು ಏರ್ಪಡಿಸಿತು. **ಮಾನಸದ್ವೀಪ** ಕೇಂದ್ರವು ಗಂಗಾಸಾಗರದಲ್ಲಿ ೪೪೪ ಯಾತ್ರಿಕರಿಗೆ ವಸತಿ, ಆಹಾರ ವ್ಯವಸ್ಥೆಯನ್ನು ಏರ್ಪಡಿಸಿದೆ. **ಕಾಲಡಿ** ಕೇಂದ್ರದಲ್ಲಿ ಜನವರಿ ೧೨ರಂದು ಸ್ವಾಮಿ ಗಿರೀಶಾನಂದಜಿಯವರು ನವೀಕೃತ 'ಆಗಮಾನಂದ ನಿವಾಸ'ವನ್ನು ಉದ್ಘಾಟಿಸಿದರು. **ದಕ್ಷಿಣೇಶ್ವರ ಮಠದಲ್ಲಿ** ಜನವರಿ ೧೮ರಂದು ಪ್ರಧಾನ ಕಾರ್ಯದರ್ಶಿ ಸ್ವಾಮಿ ಸುವೀರಾನಂದಜಿಯವರು ನವೀಕೃತ ಬಹೂಪಯೋಗಿ ಕಟ್ಟಡವನ್ನು ಉದ್ಘಾಟಿಸಿದರು. **ನರೋತ್ತಮ ನಗರ** ಕೇಂದ್ರದಲ್ಲಿ ಜನವರಿ ೨೪ರಂದು ಹೊಸ ನೌಕರರ ನಿವಾಸ 'ಶಿವಾನಂದ ಭವನ'ವನ್ನು ಉದ್ಘಾಟಿಸಲಾಯಿತು.

**ಮೌಲ್ಯಶಿಕ್ಷಣ ಕಾರ್ಯಕ್ರಮ ಹಾಗೂ ಯುವ ಸಮ್ಮೇಳನಗಳು:** ೧) ಕೊಯಂಬತ್ತೂರು ಮಿಷನ್, ಗುರುಗ್ರಾಮ, ಧಾಲೇಶ್ವರ (ಅಗರ್ತಲಾ), ಕಾಮಾರಪುಕುರ, ತಂಜಾವೂರು ಕೇಂದ್ರಗಳಲ್ಲಿ ಮೌಲ್ಯಶಿಕ್ಷಣ ಕಾರ್ಯಕ್ರಮಗಳು ನಡೆದವು. ಇಂದೋರ್, ಜಲಪ್ಯಾಗುಡಿ, ಕಾನ್ಪುರ, ನವದ್ವೀಪ, ರಾಯ ಪುರ, ಸೋಮ್‌ಸರ್, ವಿವೇಕನಗರ (ಅಗರ್ತಲಾ)ಕೇಂದ್ರಗಳಲ್ಲಿ ಯುವ ಸಮ್ಮೇಳನಗಳು ನಡೆದವು.

**ರಾಷ್ಟ್ರೀಯ ಯುವ ದಿನಾಚರಣೆ :** ಜನವರಿ ೧೨ರಂದು ರೋಮನ್ ಕ್ಯಾಲೆಂಡರ್ ಪ್ರಕಾರ ಸ್ವಾಮಿ ವಿವೇಕಾನಂದರ ಜನ್ಮದಿನವಾಗಿದ್ದು, ಬೇಲೂರು ಮಠ ಹಾಗೂ ಬಹುತೇಕ ಎಲ್ಲ ಶಾಖಾಕೇಂದ್ರಗಳಲ್ಲಿ , ವಿಶೇಷವಾಗಿ ಶೈಕ್ಷಣಿಕ ಕೇಂದ್ರಗಳಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಮೆರವಣಿಗೆ, ಸಾರ್ವಜನಿಕ ಸಭೆ, ಸ್ಪರ್ಧಾ ಚಟುವಟಿಕೆ ಮುಂತಾದ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

**ನೇತ್ರಚಿಕಿತ್ಸೆ ಶಿಬಿರ ಹಾಗೂ ವೈದ್ಯಕೀಯ ಶಿಬಿರಗಳು :** ಅಸನ್ಸೋಲ್, ಬಂಕುರ, ಚೆನ್ನೈ ಮಠ, ಚೆನ್ನೈ ಸ್ಟುಡೆಂಟ್ಸ್ ಹೋಂ, ಕೊಯಂಬತ್ತೂರು ಮಿಷನ್, ಡಿಗ್‌ಬಾಯ್, ಜೆಮ್‌ಶೆಡ್‌ಪುರ, ಲಕ್ನೋ, ಮದುರೈ, ಪುರಿ ಮಠ, ನಟ್ಟರಾಂಪಳ್ಳಿ, ರಹರಾ, ರಾಂಚಿ ಮೊರಾಬಾದಿ, ಸಕ್ವಾರ್, ಸೇಲಂ, ತಂಜಾವೂರು ತಿರುಮಕೂಡಲ್ ಹಾಗೂ ವಿವೇಕನಗರ ಕೇಂದ್ರಗಳು ವೈದ್ಯಕೀಯ ಶಿಬಿರಗಳನ್ನು ನಡೆಸಿದವು.









Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020